# ಏತ ನೀರಾವರಿ ಹೂಳೆತ್ತುವ ಕಾರ್ಯಕ್ಕೆ ವರ್ತಕರ ಸಂಘ ಹಾಗೂ ವಿವಿಧ ಸಂಘಟನೆಗಳಿಂದ 69ಸಾವಿರ ರೂ.ಗಳ ದೇಣಿಗೆ



**ಹಗರಿಬೊಮ್ಮನಹಳ್ಳಿ**

ಸುಕ್ಷೇತ್ರ ನಂದಿಪುರ ಮಠದ ಮಹೇಶ್ವರ ಸ್ವಾಮೀಜಿ ಮತ್ತು ತಂಬ್ರಹಳ್ಳಿ ಅಚ್ಚುಕಟ್ಟು ಪ್ರದೇಶದ ರೈತರ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿರುವ ಏತ ನೀರಾವರಿ ಯೋಜನೆಯ ಕಾಲುವೆಯ ಹೂಳೆತ್ತುವ ಕಾರ್ಯಕ್ಕೆ ಹ.ಬೊ.ಹಳ್ಳಿ ಚೇಂಬರ್ ಆಫ್ ಕಾಮರ್ಸ್ ಪದಾಧಿಕಾರಿಗಳು ಗುರುವಾರ ಕಾರ್ಯನಡೆಯುವ ಸ್ಥಳಕ್ಕೆ ಭೇಟಿ ನೀಡುವ ಮೂಲಕ ತಮ್ಮ ಸಂಘಟನೆಯಿಂದ 63ಸಾವಿರ ರೂ.ಗಳ ದೇಣಿಗೆಯನ್ನು ಸಲ್ಲಿಸಿದರು.

ಸಂಘದ ನೂತನ ಆಧ್ಯಕ್ಷ ಎಸ್.ಎಂ.ಚಂದ್ರಯ್ಯ ಮಾತನಾಡಿ, ಉತ್ತಮ ಮಳೆಬೆಳೆ ಬಂದು ರೈತರ ಬಾಳು ಬಂಗಾರವಾಗದರೆ ಮಾತ್ರ ನಾವು ನೀವೆಲ್ಲ, ಆದರೆ, ಮಳೆಯ ಕಣ್ಣಮುಚ್ಚಾಲೆಯಿಂದ ರೈತರು ಕಂಗಲಾಗುತಿದ್ದಾರೆ. ತುಂಗಭದ್ರ ವ್ಯಾಪ್ತಿಯಲ್ಲಿ ಸುರಿಯುವ ಮಳೆಗೆ ನಮ್ಮ ಹೊಸಪೇಟೆ ಡ್ಯಾಂಗೆ ನೀರು ಹರಿದು ಬರುತತಿದೆ. ಈ ಹಿನ್ನೀರನ್ನೆ ನಂಬಿಕೊಂಡಿರುವ ರೈತರಿಗೆ, ಕಾಲುವೆಯಲ್ಲಿ ಹೂಳುತುಂಬಿಕೊಂಡು ಅಡ್ಡಿಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವನ್ನೇ ನಂಬಿಕೊಂಡು ಕೂಡುವುದಕಿಂತ ರೈತರು ಹಾಗೂ ಮಠಧೀಶರು ಹೂಳು ತೆಗೆಸಲು ಮುಂದಾಗಿರುವುದು ಶ್ಲಾಘನೀಯ ಈ ಕಾರ್ಯಕ್ಕೆ ನಮ್ಮ ಸಂಘಟನೆಯಿಂದ ಸಣ್ಣಸಹಕಾರ ನೀಡಲು ಬಯಸುತ್ತೇವೆ ಎಂದರು.

ಶಿವಾ ಟ್ರೇಡರ್‍ಸ ಮಾಲೀಕ ಅಕ್ಕಿ ಶಿವಕುಮಾರ್ ಮಾತನಾಡಿ, ತುಂಗಭದ್ರ ಆಣೆಕಟ್ಟು ನಿರ್ಮಾಣವಾದ ಬಳಿಕ, ಜಲಾಶಯದ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ 66 ಕ್ಕೂ ಹೆಚ್ಚು ಗ್ರಾಮಗಳ ರೈತರ ಅನುಕೂಲಕ್ಕಾಗಿ, ಅಂದಿನ ರೈತರ ಬಗ್ಗೆ ಕಾಳಜಿ ಹೊಂದಿದ ಜನಪ್ರತಿನಿಧಿಗಳ ಪ್ರಯತ್ನದಿಂದ ಏತ ನೀರಾವರಿ ಯೋಜನೆಗಳು ಜಾರಿಗೊಂಡವು. ಆದರೆ ನಿರ್ಮಾಣವಾದ ಕಂಡ ಯಶಸ್ಸುಗಳು ಇತ್ತೀಚಿಗೆ ಕಾಲುವೆಗಳೆಲ್ಲ ಹೂಳುತುಂಬಿ ಗುರಿಯಷ್ಟು ರೈತರ ಭೂಮಿಗಳಿಗೆ ನೀರುಣಿಸಲು ಆಗುತ್ತಿಲ್ಲ, ಆದ್ದರಿಂದ ಹೂಳು ತೆಗೆಯುವುದು ಅನಿವಾರ್ಯವಾಗಿದೆ. ಈ ಕಾರ್ಯಕ್ಕೆ ಪ್ರತಿಯೊಬ್ಬರ ಸ್ಪಂದನೆ ಅವಶ್ಯಕವಾಗಿದೆ ಎಂದರು.

ಮಹೇಶ್ವರ ಸ್ವಾಮಿಜಿಗಳು ಮಾತನಾಡಿ, ಸಂಕಷ್ಟದಲ್ಲಿರುವ ರೈತರಿಗೆ ಎಲ್ಲಾ ವರ್ಗದ ಜನರು ಸ್ಪಂದನೆ ಅವಶ್ಯಕವಾಗಿದೆ. ಹೂಳು ತೆಗೆಸುವ ವಿಚಾರದಲ್ಲಿ ಪಕ್ಷ ಭೇದ ಮರೆತು ಎಲ್ಲರಲ್ಲಿ ಸಹಕಾರ ಕೋರುತಿದ್ದೇವೆ. ಅದರಂತೆ, ಬತ್ತದ ವ್ಯಾಪಾರಿಗಳು ಹಾಗೂ ರಸಗೊಬ್ಬರ ಅಂಗಡಿ ಮಾಲೀಕರಿಂದ ತಲಾ 21 ಸಾವಿರ ರೂ.ಗಳು, ಎಪಿಎಂಸಿಯಿಂದ 11 ಸಾವಿರ ರೂ, ವೈದ್ಯ ಬಸವರಾಜರೆಡ್ಡಿ ಮತ್ತು ಕಲಾದಗಿ ಬಸವರೆಡ್ಡಿ ತಲಾ 5ಸಾವಿರ ರೂ, ನಂದೀಶ್ವರ ವಿವಿದುದ್ದೇಶ ಸಹಕಾರಿ ಬ್ಯಾಂಕ್ ಮತ್ತು ಮರಿಯಮ್ಮನಹಳ್ಳಿಯ ಆರ್‌ಟಿಓ ಪರಮೇಶ್ವರಪ್ಪರಿಂದ ತಲಾ 3100 ರೂ. ಗಳು ಹೂಳೆತ್ತುವ ಕಾರ್ಯಕ್ಕೆ ಒಟ್ಟು 69,200 ರೂ. ಗಳು ದೇಣಿಗೆ ರೂಪದಲ್ಲಿ ಒಂದೇ ದಿನ ಬಂದಿದ್ದು, ಇದಕ್ಕೂ ಮುಂಚಿತವಾಗಿ ವಿವಿಧ ಸಂಘಟನೆಗಳು ಹಾಗೂ ಜನಪ್ರತಿನಿಧಿಗಳಿಂದ ದೇಣಿಗೆ ಸಂಗ್ರಹವಾಗಿದೆ. ಇದರಿಂದ ಕೈಗೊಂಡ ಕಾರ್ಯ ಯಶಸ್ವಿಯಾಗಲಿದೆ ಎಂದರು.

ಎಪಿಎಂಸಿ ನಿರ್ದೇಶಕ ಎನ್ ವೆಂಕಣ್ಣ, ಪುರಸಭೆ ಸದಸ್ಯ ಬಾದಾಮಿ ಮೃತ್ಯುಂಜಯ, ವರ್ತಕರಾದ ಉಪ್ಪಾರ ಬಾಲು, ಬಾದಾಮಿ ರಾಜಣ್ಣ, ದಿನೇಶ್ ಧಾರಿವಾಲ್, ರುದ್ರಪ್ಪ, ಮಲ್ಲಣ್ಣ, ಮಹದೇವಪ್ಪ, ಗೌರಜ್ಜಿ ಬಸವರಾಜ್, ಮ್ಯಾಗಳಮನಿ ಬಸವರಾಜ್, ಉಪ್ಪಾರ ಭೀಮಣ್ಣ, ರೈತರಾದ ಮೈನಳ್ಳಿ ಕೊಟ್ರೇಶಪ್ಪ, ಹ್ಯಾಟಿ ಆನಂದಪ್ಪ, ಗ್ರಾ.ಪಂ.ಸದಸ್ಯ ಅಳವಂಡಿ ಯಂಕಪ್ಪ, ಬಾವಿಕಟ್ಟಿ ಪಂಪಣ್ಣ ಹಾಗೂ ಎಚ್‌ಬಿ ಗಂಗಾಧರಗೌಡ ಇದ್ದರು.

# ಅಂಬೇಡ್ಕರ್ 20ನೇ ಶತಮಾನದ ಶ್ರೇಷ್ಠ ಚಿಂತಕರು: ಪ್ರೊ.ಸಿದ್ಧಲಿಂಗಯ್ಯ




**ಹಂಪಿ**

ಕನ್ನಡ ವಿಶ್ವವಿದ್ಯಾಲಯ ಶ್ರೀ ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠ ಹಾಗೂ ಪರಿಶಿಷ್ಟ ಪಂಗಡಗಳ ಸಮಗ್ರ ಅಧ್ಯಯನ ಕೇಂದ್ರವು 17 ರಿಂದ 18 ಜೂನ್ 2017ರ ವರೆಗೆ ಏರ್ಪಡಿಸಿದ್ದ ಅಂಬೇಡ್ಕರ್ ಅವರನ್ನು ಓದುವುದು ಹೇಗೆ? ಅಧ್ಯಯನ ಶಿಬಿರವನ್ನು ಭುವನವಿಜಯ ಸಭಾಂಗಣದಲ್ಲಿ ಅರಳಿಗಿಡಕ್ಕೆ (ಕುಂಡದಲ್ಲಿ) ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಬದುಕಿದ್ದಾಗ ಅವರಿಗೆ ಮಾನ್ಯತೆ ಗೌರವ ದೊರೆಯಲಿಲ್ಲ, ಉನ್ನತ ಸ್ಥಾನದಲ್ಲಿದ್ದರೂ ಅವರಿಗೆ ಸಾಮಾನ್ಯ ನಾಗರೀಕನಿಗೆ ಸಿಗುವ ಗೌರವ ದೊರೆಯಲಿಲ್ಲ, ಮಾಧ್ಯಮಗಳು ಅವರನ್ನು ದೇಶ ವಿರೋಧಿ ಎಂದು ಬಿಂಬಿಸಿದ್ದವು. ಮಾಧ್ಯಮಗಳು ನನಗೆ ಅನ್ಯಾಯ ಮಾಡಿವೆ ಎಂದು ಸ್ವತಃ ಅಂಬೇಡ್ಕರ್ ನೋವಿನಿಂದ ಹೇಳಿಕೊಂಡಿದ್ದಾರೆ. ಅವರು ಕಾಂಗ್ರೆಸ್ ಪಕ್ಷವನ್ನು ಹಾಗೂ ಮಹಾತ್ಮಗಾಂಧಿಯನ್ನು ವಿರೋಧ ಮಾಡಿದ್ದು ಇದಕ್ಕೆ ಕಾರಣವಾಗಿತ್ತು. ಬ್ರಿಟೀಷ್ ವೈಸ್ ರಾಯ್ ಮೌಂಟ್ ಬ್ಯಾಟನ್ ಅವರನ್ನು ದೇವಾಲಯದ ಪ್ರವೇಶಕ್ಕೆ ಅನುವು ಮಾಡಿ ಕೊಟ್ಟರು. ಆದರೆ ಅಂಬೇಡ್ಕರ್‌ಗೆ ದೇವಾಲಯ ಪ್ರವೇಶಿಸಲು ಬಿಡಲಿಲ್ಲ, ಮನುಸ್ಮೃತಿ ದಹನದ ಸಂದರ್ಭದಲ್ಲಿ ಬಹಳ ಕಿರುಕುಳ ಅನುಭವಿಸಿದರು. ನೊಂದು ಮಾನಸಿಕ ಹಿಂಸೆ ಅನುಭವಿಸಿದರು. ಆಷದರೆ ಅವರು ದ್ವೇಷ ಬೆಳೆಸಿಕೊಳ್ಳಲಿಲ್ಲ, ದೇಶದ ಹಿತ ಆಯ್ಕೆ ಮಾಡಿ ಕೊಂಡು ಕಾನೂನಾತ್ಮಕವಾಗಿ ಹೋರಾಡಿದರು ಎಂದು ತಿಳಿಸುತ್ತ ಕಾಳಾರಾಮನ ದೇವಾಲಯಕ್ಕೆ ಅಂಬೇಡ್ಕರ್ ಪ್ರವೇಶಿಸಲು ಹೋದಾಗ ಬೀಗ ಹಾಕಿ ಅವರ ಮೇಲೆ ಹಲ್ಲೆ ಮಾಡಿದರು. ಇತ್ತೀಚೆಗೆ ಈ ದೇವಾಲಯದ ಪುರೋಹಿತರ ಮೊಮ್ಮಕ್ಕಳು ಪತ್ರಿಕಾಗೋಷ್ಠಿ ಕರೆದು ಆಗ ನಮ್ಮ ಹಿರಿಯರು ಅಂಬೇಡ್ಕರ್ ಅವರೊಂದಿಗೆ ವರ್ತಿಸಿದ ರೀತಿಗೆ ನಾವು ಕ್ಷಮೆ ಕೋರುತ್ತೇವೆ ಎಂದು ಕೇಳಿದ ಘಟನೆ ವಿವರಿಸಿದರು.

ಅಂಬೇಡ್ಕರ್ ಅವರನ್ನು ದಲಿತರ ನಾಯಕ, ಸಂವಿಧಾನ ಪಿತೃ ಎಂಬುದಕ್ಕಷ್ಟೇ ಸೀಮಿತಗೊಳಿಸಬಾರದು. ಶೋಷಿತರ ನಾಯಕ, ರಾಷ್ಟ್ರನಾಯಕ ಎಂದು ಬಿಂಬಿಸಬೇಕಾಗಿದೆ. ಕಾರ್ಮಿಕರಿಗೆ, ರೈತವರ್ಗಕ್ಕೆ, ಕೂಲಿಕಾರರಿಗೆ, ಮಹಿಳೆಯರಿಗಾಗಿ ಅವರು ನೀಡಿದ ಕೊಡುಗೆಯನ್ನು ಚರ್ಚಿಸಬೇಕಾಗಿದೆ. ಸಮಗ್ರಶೋಷಿತರು ಅವರ ಕೊಡುಗೆಯನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ತಿಳಿಸುತ್ತ, ಇತ್ತೀಚಿನ ದಿನಗಳಲ್ಲಿ ವಿಶ್ವದಾದ್ಯಂತ ಭಾರತವನ್ನು ಒಳಗೊಂಡು ಅಂಬೇಡ್ಕರ್ ಅವರನ್ನು ಕುರಿತು ಧೋರಣೆ ಬದಲಾಗಿರುವುದನ್ನು ಗೌರವಿಸುವುದನ್ನು ಕಾಣುತ್ತಿದ್ದೇವೆ. ಎಡಪಂಥೀಯರು, ಬಲಪಂಥಿಯರು ಎಲ್ಲರಿಗೂ ಅಂಬೇಡ್ಕರ್ ಬೇಕಾದ ವ್ಯಕ್ತಿ ಆಗಿದ್ದಾರೆ. ಇದು ಸಕಾರಾತ್ಮಕ ವಿಚಾರ ಎಂದು ಸಂತಸಪಟ್ಟರು.

ಔಟ್‌ಲುಕ್ ಮತ್ತು ಬಿಬಿಸಿ ನಡೆಸಿದ ಸಮೀಕ್ಷೆಯಲ್ಲಿ ಮಹಾತ್ಮಗಾಂಧಿ ನಂತರ ಶ್ರೇಷ್ಠ ವ್ಯಕ್ತಿ ಎಂದರೆ ಜವಹರ್‌ಲಾಲ್ ನೆಹರು ಅವರಿಗೆ 8000 ಮತ ಬಂದರೆ, ನಂತರ ಇಂದಿರಾಗಾಂಧಿ ಅವರಿಗೆ 19,000 ಮತ ಬಂದಿತ್ತು. ಆದರೆ ಅಂಬೇಡ್ಕರ್ ಅವರಿಗೆ 19,9000 ಮತ ಬಂದಿದ್ದವು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾನ್ಯಕುಲಪತಿಯವರಾದ ಡಾ. ಮಲ್ಲಿಕಾ ಎಸ್. ಘಂಟಿ ಅವರು ಮಾತನಾಡುತ್ತ ಯಾವ ಹಿಂದು ಧರ್ಮವನ್ನು ಅಂಬೇಡ್ಕರ್ ವಿರೋಧ ಮಾಡುತ್ತಿದ್ದರು, ಯಾವ ಹಿಂದುಧರ್ಮದ ಸಂವಿಧಾನ ಎಂದು ಮನಸ್ಮೃತಿಯನ್ನು ಇವತ್ತಿಗೂ ಆಚರಿಸುತ್ತ ಬದುಕುತ್ತಿದ್ದೇವೋ ಅಂತಹ ಮನುಸ್ಮೃತಿಯನ್ನು ಸುಟ್ಟು ಹಾಕಿದ ಅಂಬೇಡ್ಕರ್ ಘಟನೆಯನ್ನು ದೃಶ್ಯಮಾಧ್ಯಮಗಳ ಮೂಲಕ ಅಂಬೇಡ್ಕರ್ ಮನುಸ್ಮೃತಿಯನ್ನು ಸುಡಲೇ ಇಲ್ಲ ಎಂದು ಹೇಳುತ್ತ ಅಂಬೇಡ್ಕರ್ ಮನುಸ್ಮೃತಿಯನ್ನು ಒಪ್ಪಿಕೊಂಡಿದ್ದರು. ಆದ್ದರಿಂದ ಸಂವಿಧಾನದ ರಚನೆಯ ಸಂದರ್ಭದಲ್ಲಿ ಮನುಸ್ಮೃತಿಯಲ್ಲಿರುವ ಸಂಗತಿಗಳನ್ನು ಒದಿದ ಅಂಬೇಡ್ಕರ್ ಸಂವಿಧಾನ ರಚನೆಗೆ ಬಳಸಿಕೊಂಡರು ಎಂದು ಮತೀಯವಾದಿಗಳು ಅಬ್ಬರದಿಂದ ಹೇಳುತ್ತಿರುವುದಕ್ಕೆ ನಾವು ಧ್ವನಿಯೆತ್ತಬೇಕು. ಅಂಬೇಡ್ಕರ್ ಅವರನ್ನು ಬ್ರಿಟೀಷ್ ಆಡಳಿತದ ಪರ ಹಿಂಸಾವಾದಿ ಎನ್ನುವ ರೀತಿಯಲ್ಲಿ ಬಿಂಬಿಸುತ್ತಿದ್ದ ಮತೀಯವಾದಿಗಳು ಇಂದು ಅಂಬೇಡ್ಕರ್ ಅವರನ್ನು ದೇಶಭಕ್ತ ಎಂದು ಹೇಳುತ್ತಿದ್ದಾರೆ. ಮುಂಚೂಣಿಯಲ್ಲಿರುವ ಯಾವ ಮಹಿಳಾ ಚಳುವಳಿಗಾರರು ಅಂಬೇಡ್ಕರ್ ಹೆಸರನ್ನು ಯಾಕೆ ಹೇಳಲಿಲ್ಲ ಎಂದರೆ ಜಾತಿಗಳು ನಮ್ಮನ್ನು ಅಷ್ಟೇ ಸಾಂಸ್ಕೃತಿಕವಾಗಿ ಕಟ್ಟಿಹಾಕಿವೆ. ಜಾತಿ ಕಾರಣದಿಂದ ನಾವು ಅಂಬೇಡ್ಕರ್ ಅವರ ವೈಚಾರಿಕ ಸಂಗತಿಗಳಿಗೆ ಮುಖಾಮುಖಿಯಾಗಲು ಸಾಧ್ಯವಾಗಿಲ್ಲ ಎಂದು ನುಡಿದರು. ಪೀಠದ ಸಂಚಾಲಕರಾದ ಡಾ.ಎ.ಎಸ್.ಪ್ರಭಾಕರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕುಲ ಸಚಿವರಾದ ಡಾ.ಡಿ. ಪಾಂಡುರಂಗಬಾಬು ಅವರು ಸ್ವಾಗತಿಸಿದರು. ಶಿಬಿರದ ನಿರ್ದೇಶಕರಾದ ಪ್ರೊ. ರಮೇಶ ಅವರು ಆಶಯ ನುಡಿದರು. ಪ್ರೊ. ಜಿ. ಪ್ರಶಾಂತನಾಯಕ್ ಅವರು ವಂದಿಸಿದರು. ಹನಸೋಗೆ ಸೋಮಶೇಖರ್ ಮತ್ತು ತಂಡದವರಿಂದ ಹೋರಾಟದ ಹಾಡಿನ ಮೂಲಕ ಕಾರ್ಯಕ್ರಮಕ್ಕೆ ಆರಂಭ ನೀಡಿದರು. ಡಾ. ಅರುಣ್ ಜೋಳದಕೂಡ್ಲಿಗಿ ನಿರೂಪಿಸಿದರು.

# ಊರಮ್ಮ ದೇವಿ ಪ್ರತಿಸ್ಥಾಪನೆಗೆ ಸ್ವಚ್ಛತೆಗೆ ಮುಂದಾದ ರೈತರು



**ಕೊಟ್ಟೂರು**

ನಂಬಿದ ಮಳೆ ಈ ವರ್ಷವೂ ಕೈಕೊಡುವ ಸೂಚನೆ ಕಂಡು ಬಂದ ಹಿನ್ನೆಲೆಯಿಂದ ರೋಸಿ ಹೋಗಿರುವ ಪಟ್ಟಣದ ರೈತರು ಇದಕ್ಕೆಲ್ಲಾ ಗ್ರಾಮದೇವತೆ ಊರಮ್ಮನ ದೇವಿಯ ಮುನಿಸು ಕಾರಣ ಎಂದು ಭಾವಿಸಿ ಭಾನುವಾರ ಊರಮ್ಮನ ಗುಡಿಯ ಸ್ವಚ್ಚತಾ ಕಾರ್ಯವನ್ನು ಕೈಗೊಂಡರಲ್ಲದೇ ಬರುವ ಶ್ರಾವಣ ಮಾಸದಲ್ಲಿ ಊರಮ್ಮನ ದೇವಿಯನ್ನು ಮತ್ತೇ ಗುಡಿಯಲ್ಲಿ ಪ್ರತಿಷ್ಠಾಪಿಸುವಂತೆ ಒತ್ತಾಯಿಸಿದರು.

ಮುಂಗಾರು ಮಳೆಗಳು ಬಹುತೇಕ ಮುಕ್ತಾಯಹಂತ ತಲುಪುವ ನಿಟ್ಟಿನಲ್ಲಿ ಸಾಗಿರುವುದು ಇಲ್ಲಿನ ರೈತರನ್ನು ಕಂಗೇಡಿಸಿದೆ. ಕಳೆದ 2 ವರ್ಷಗಳಿಂದಲೂ ಮಳೆ ವಿಫಲಗೊಂಡ ಹಿನ್ನಲೆಯಲ್ಲಿ ತೀವ್ರ ಬಗೆಯ ಬರಗಾಲ ಈ ಬಾರಿಯೂ ಮತ್ತೆ ಮುಂದುವರೆಯುವ ಹಾದಿ ಹಿಡಿದಿದೆ. ಇಲ್ಲಿನ ಊರಮ್ಮನ ದೇವಿಯನ್ನು ಗುಡಿಯ ಜೀರ್ಣೋದ್ದಾರ ಕಾರಣಕ್ಕಾಗಿ ಕಳೆದ ಏಳು ವರ್ಷಗಳ ಹಿಂದೆ ಹತ್ತಿರದ ಕಾಳಮ್ಮನ ಗುಡಿಗೆ ಸ್ಥಳಾಂತರಿಸಲಾಗಿದೆ. ಇಷ್ಟು ಅವಧಿಯಲ್ಲಿ ಜೀರ್ಣೋದ್ದಾರ ಕಾಮಗಾರಿಯನ್ನು ಕೈಗೊಂಡು ಮುಗಿಸಬೇಕಿದ್ದ ಊರಮ್ಮ ಗುಡಿಯ ದೈವಬಳಗ ಕಾಮಗಾರಿಯನ್ನು ಸಂಪೂರ್ಣಗೊಳಿಸದೆ ಅಲಕ್ಷಿಸುತ್ತಿದೆ ಎಂದು ಪಟ್ಟಣದ ನಾಗರೀಕರು, ರೈತರು ಆಕ್ರೋಶ ವ್ಯಕ್ತಪಡಿಸತೊಡಿಸತೊಡಗಿದ್ದಾರೆ. ದೇವಿಯನ್ನು ಸ್ಥಳಾಂತರಿಸಿದ ವರ್ಷದಿಂದಲೂ ನಮಗೆ ಮಳೆಯ ಕೊರತೆ ಉಂಟಾಗಿದೆ ಎಂಬುದು ಅವರ ನೋವಾಗಿದೆ. ಕೂಡಲೇ ಗುಡಿಯ ಕಾಮಗಾರಿಯನ್ನು ಪೂರ್ಣಗೊಳಿಸಿ ಊರಮ್ಮ ದೇವಿಯನ್ನು ಮೂಲ ಸ್ಥಳದಲ್ಲಿ ಪ್ರತಿಷ್ಠಾಪಿಸಬೇಕೆಂದು ಒತ್ತಾಯಿಸಿದ್ದಾರೆ.

ಕೋಟೆ ಭಾಗದ ರೈತರುಗಳಾದ ಅಂಬ್ರಿ ಈರಣ್ಣ, ಬಂದಾತರ ಚಂದ್ರಪ್ಪ, ಬೆಳ್ಳುಳ್ಳಿ ಕೊಟ್ರೇಶಪ್ಪ, ರೇವಣಸಿದ್ದಪ್ಪ, ಕರಡಿ ಸಿದ್ದಪ್ಪ, ಗಡ್ಡಿ ರಾಜ, ಗರಗದ ಗುರುವಪ್ಪ, ಮಗನಹಳ್ಳಿ ಆನಂದ, ಕೂಡ್ಲಿಗಿ ಕೊಟ್ರೇಶಪ್ಪ, ಬಂಡ್ರಿ ವೀರೇಶ್, ಸಿದ್ದೇಶ.ಬಿ, ಪ್ರವೀಣ್, ಗಡ್ಡಿ ಕೊಟ್ರಪ್ಪ, ಮಲ್ಲೇಶ ಮತ್ತಿತರರು ಭಾನುವಾರ ಬೆಳಗಿನಿಂದಲೇ ಗುಡಿಯ ಸ್ವಚ್ಚತೆ ಕೈಗೊಂಡು ಗುಡಿಯ ಪುನಾರಂಭಕ್ಕೆ ಒತ್ತಾಯಿಸಿದರು

**ಪ್ರತಿಷ್ಠಾಪನೆ:**

ಊರಮ್ಮನದೇವಿಯನ್ನು ಶ್ರಾವಣ ಮಾಸದಲ್ಲಿ ಗುಡಿಯಲ್ಲಿ ಖಂಡಿತವಾಗಿ ಪ್ರತಿಷ್ಠಾಪಿಸಲು ಮುಂದಾಗಿದ್ದೇವೆ. ಈ ಕಾರಣಕ್ಕಾಗಿ ಉಜ್ಜಯಿನಿ ಜಗದ್ಗುರುಗಳ ಬಳಿಗೆ ಭಾನುವಾರ ತೆರಳಿ ದಿನಾಂಕವನ್ನು ನಿಗದಿಗೊಳಿಸುತ್ತುವೆ ಹಣದ ಕಾರಣಕ್ಕಾಗಿ ಜೀರ್ಣೋದ್ದಾರ ಕಾಮಗಾರಿ ತಡವಾಗಿದೆ. ಯಾವುದೇ ಕಾರಣಕ್ಕೂ ನಾವುಗಳು ವಿಳಂಬ ಮಾಡೇ ಇಲ್ಲ. ಊರಮ್ಮ ದೇವಿಯ ಗುಡಿಯನ್ನು ಬೃಹತ್ ಪ್ರಮಾಣದಲ್ಲಿ ನಿರ್ಮಿಸುವ ಗುರಿ ಹೊಂದಿ ಈ ಕೆಲಸಕ್ಕೆ ಮುಂದಾದೆವು ದೇವಿಯನ್ನು ಬಹಳ ದಿನಗಳವರೆಗೆ ಗುಡಿಯಲ್ಲಿ ಪ್ರತಿಷ್ಠಾಪಿಸದೇ ಇರುವುದು ನಮಗೂ ನೋವಾಗಿದೆ. ಆದರೆ ಹಣಕಾಸಿನ ತೊಂದರೆ ಕಾರಣಕ್ಕಾಗಿ ಸಕಾಲಕ್ಕೆ ಮುಗಿಸಲಾಗಿಲ್ಲ ಮಳೆ ಬರಿಸುವ ದೇವಿ ಎಂದೇ ಊರಮ್ಮದೇವಿ ಖ್ಯಾತಿಯಾಗಿದ್ದು, ಗುಡಿಯ ಪುನಾರಂಭಕ್ಕೆ ತಕ್ಷಣವೇ ತೊಡಗಿಸಿಕೊಳ್ಳಲು ಸಿದ್ದತೆ ಕೈಗೊಂಡಿದ್ದೇವೆ-ಕೆ.ಎಸ್.ಈಶ್ವರಗೌಡ, ಅಧ್ಯಕ್ಷರು, ಊರಮ್ಮನಗುಡಿ ಅಭಿವೃದ್ದಿ ಸಮಿತಿ,ಕೊಟ್ಟೂರು.

# ಕಟ್ಟಡ ಮಾಲೀಕರಿಂದ ಅರ್ಜಿ ಆಹ್ವಾನ

**ಬಳ್ಳಾರಿ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸಲಾಗುತ್ತಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಸಂಖ್ಯಾಬಲ 100 ಆಗಿದ್ದು, ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ಸಾಕಷ್ಟು ಸ್ಥಳವಕಾಶ ಹೊಂದಿರುವ ಹಾಗೂ ಸಂಖ್ಯಾಬಲಕ್ಕೆ ಅನುಗುಣವಾದ ಮೂಲಭೂತ ಸೌಕರ್ಯ 10 ಸ್ನಾನ ಗೃಹ, 10 ಶೌಚಾಲಯಗಳು, ಸ್ವಂತ ಬೋರ್‌ವೆಲ್ ಹಾಗೂ ಕಾಂಪೌಂಡ್ ಗೋಡೆ ಹೊಂದಿರುವ ಸುಸಜ್ಜಿತವಾದ ಕಟ್ಟಡ ಬಾಡಿಗೆಗೆ ನೀಡಲು ಆಸಕ್ತ ಕಟ್ಟಡ ಮಾಲೀಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ತಿಲಕ್ ನಗರ, ಜಯ ನಗರ, ಬೆಳಗಲ್ ಕ್ರಾಸ್, ಸಿ.ಎಂ.ಸಿ ಕಾಲೋನಿ, ಕೌಲ್ ಬಜಾರ್, ಸಪ್ತಗಿರಿ ಫಂಕ್ಷನ್ ಹಾಲ್ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕಟ್ಟಡ ಬಾಡಿಗೆ ಬೇಕಾಗಿರುತ್ತದೆ. ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸುವ ಬಾಡಿಗೆ ಆಧಾರದ ಮೇಲೆ ಬಾಡಿಗೆ ನೀಡಲು ಒಪ್ಪಿಗೆ ಇದ್ದಲ್ಲಿ, ಅಂತಹ ಮಾಲೀಕರು ಅಗತ್ಯವಾದ ದಾಖಲಾತಿಗಳೊಂದಿಗೆ ತಾಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಆರ್.ಟಿ.ಒ. ಆಫೀಸ್ ಹತ್ತಿರ, ಕಂಟೋನ್ ಮೆಂಟ್, ಬಳ್ಳಾರಿ ಇವರಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ.08392-244492 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

**ಬಳ್ಳಾರಿ,**

2016-17 ನೇ ಸಾಲಿನಲ್ಲಿ ತೇರ್ಗಡೆಯಾದ 10ನೇ ತರಗತಿ ಹಾಗೂ ದ್ವಿತಿಯ ಪಿ.ಯು.ಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ 60% ಹಾಗೂ ಅಧಿಕ ಅಂಕಗಳನ್ನು ಪಡೆದ ಮಾಜಿ ಸೈನಿಕರ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಜನರಲ್ ಕೆ.ಎಸ್, ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಮಾಜಿ ಸೈನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಹರಿರುವ ಮಾಜಿ ಸೈನಿಕರು ಕೆಲಸದ ವೇಳೆಯಲ್ಲಿ ಈ ಕಾರ್ಯಾಲಯವನ್ನು ಸಂಪರ್ಕಿಸಿ ಅರ್ಜಿ ನಮೂನೆಯನ್ನು ಪಡೆದು ಭರ್ತಿಮಾಡಿ ತ್ರಿ-ಪ್ರತಿಗಳಲ್ಲಿ ಸೆ.25 ರೊಳಗಾಗಿ ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಧಾರವಾಡ ಇವರಿಗೆ ಸಲ್ಲಿಸಬೇಕು. ನುಕ್ರಮವಾಗಿ ಹೆಚ್ಚು ಅಂಕಗಳನ್ನು ಪಡೆದ ಎಸ್.ಎಸ್.ಎಲ್.ಸಿ ಇಬ್ಬರಿಗೆ ಮತ್ತು ಪಿ.ಯು.ಸಿ ಒಬ್ಬರಂತೆ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂ. ಸಂ: 0836-2440176 ನ್ನು ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಛೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯಿಂದ ಮನವಿ



**ಹಗರಿಬೊಮ್ಮನಹಳ್ಳಿ**

ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ಜಿಎಸ್‌ಟಿಯು ನ್ಯೂನ್ಯತೆಯಿಂದ ಕೂಡಿದೆ ಎಂದು ವಿರೋಧಿಸಿರುವ ಛೇಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ತಾಲೂಕು ಸಮಿತಿಯವರು ತಹಸೀಲ್ದಾರ್‌ಗೆ ಮನವಿಸಲ್ಲಿಸುವ ಮೂಲಕ ಮತ್ತೊಮ್ಮೆ ಜಿಎಸ್‌ಟಿ ಬಗ್ಗೆ ಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ.

ತಾಲೂಕು ಕಚೇರಿಯ ಬಳಿ ಗುರುವಾರ ಸೇರಿದ ಸಂಘಟನೆಯವರು ಉಪತಹಸೀಲ್ದಾರ್ ಮಹಾಂತೇಶ್ ಗೆ ಮನವಿಪತ್ರವನ್ನು ಸಲ್ಲಿಸಿ ನಂತರ ಮಾತನಾಡಿದ ಕಾರ್ಯದರ್ಶಿ ಕೋರಗಲ್ ಗಿರಿರಾಜ್ ದಿನನಿತ್ಯ ವಹಿವಾಟಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಜಿಎಸ್ ಟಿ ತೆರೆಗೆಗಳನ್ನು ಕಡಿಮೆ ಮಾಡುವುದರ ಮೂಲಕ ಜನಸಾಮಾನ್ಯರ ಹಿತ ಕಾಪಾಡಬೇಕಾಗಿದೆ. ಈ ಜಿಎಸ್ ಟಿ ಜಾರಿಗೆ ತರುವ ಮುನ್ನ ವ್ಯಾಪಾರಿಗಳು ತಿಂಗಳಿಗೆ ಒಂದುಬಾರಿ ವರದಿಯನ್ನು ಸಲ್ಲಿಸಲಾಘುತಿತ್ತು. ಆದರೆ ಈಗ ಅದೇ ತಿಂಗಳಿಗೆ 3ಬಾರಿ ವರದಿ ಸಲ್ಲಿಸಬೇಕಾಗುತ್ತದೆ. ಇದರಿಂದ ವ್ಯಾಪಾರಿಗಳಿಗೆ ವ್ಯಾಪಾರ ಮಾಡುವುದಕ್ಕಿಂತ ಲೆಕ್ಕಪತ್ರಗಳ ಪರಿಶೀಲನೆಯಲ್ಲಿಯೇ ಸಮಯ ವ್ಯರ್ಥವಾಗುತ್ತದೆ ಎಂದರು.

ನಂತರ ಸಂಘಟನೆಯ ಅಧ್ಯಕ್ಷ ಎಸ್.ಎಂ.ಚಂದ್ರಯ್ಯ ಮಾತನಾಡಿ, ಜಿಎಸ್‌ಟಿಬಗ್ಗೆ ಯಾಋಇಗೂ ಸರಿಯದ ಮಾಹಿತಿ ದೊರೆಯದೆ ಇರುವುದು. ಸಾಮಾನ್ಯ ಜನರಿಗೆ ಇದರ ಹೊರೆಯಾಗಲಿದೆ. ದೇಶಕ್ಕೆ ರೈತ ಬೆನ್ನೆಲುಬು ಎಂದು ಹೇಳುವ ನಾವು ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ವ್ಯಾಪಾರಸ್ಥರು ಸಲ್ಲಿಸುವ ತೆರಿಗೆ ಕೂಡ ಅಷ್ಟೇ ಪ್ರಾಮುಖ್ಯತೆಯನ್ನು ಹೊಂದಿದೆ ಕೇಂದ್ರ ಸರ್ಕಾರ ತಂದಿರುವ ಈ ನೀತಿ ಸಂಪೂರ್ಣ ನ್ಯೂನ್ಯತೆಯಿಂದ ಕೂಡಿದೆ ಎಂದರು. ಉಪಾಧ್ಯಕ್ಷ ಕೆ.ಬಸವರೆಡ್ಡಿ, ಜೋಗಿರಾಮ್, ಬದಾಮಿ ಚನ್ನಬಸಪ್ಪ, ಎಪಿಎಂಸಿ ವರ್ತಕರ ಸಂಘದ ಅಧ್ಯಕ್ಷ ಎಂ.ಮಹಾದೇವಪ್ಪ, ಕ್ಲಾತ್ ಮರ್ಚ್‌ಂಟ್ ಸಂಘಟನೆಯ ಅಧ್ಯಕ್ಷ ಕಿಶೋರ್ ಜೀರವಾಲ್, ರಾಮಸಿಂಗ್, ಭರತ್ ಕುಮಾರ್, ಮೊಬೈಲ್‌ಗಳ ಸರ್ವಿಸ್ ಸಂಘಟನೆಯ ಅಧ್ಯಕ್ಷ ಗುಲ್ಜರ್ ಅಹಮದ್, ಪ್ರತಾಪ್ ರಾಮ್, ಮಾನವ ಹಕ್ಕುಗಳ ಹೋರಾಟ ಸಮಿತಿಯ ಅಧ್ಯಕ್ಷ ಚನ್ನವೀರ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿ ವೇತನ ನೇರವಾಗಿ ಬ್ಯಾಂಕ್ ಖಾತೆಗೆ

**ಬಳ್ಳಾರಿ**

ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಆನ್‌ಲೈನ್ ಮೂಲಕ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು ಎಂದು ತಾಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ತಿಳಿಸಿದ್ದಾರೆ.

ಪಾಲಕರು ಹಾಗೂ ಪೋಷಕರು ತಮ್ಮ ಮಕ್ಕಳ ಹೆಸರಿನಲ್ಲಿ ರಾಷ್ಟ್ರೀಕೃತ ಅಥವಾ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯ ಬ್ಯಾಂಕ್‌ಗಳಲ್ಲಿ ಖಾತೆ ತೆರೆದು, ಐ.ಎಫ್. ಎಸ್.ಸಿ. ಕೋಡ್ ಇರುವ ಪಾಸ್‌ಬುಕ್, ಆಧಾರ್ ಕಾಡ್ ್, ಜಾತಿ ಹಾಗೂ ಆದಾಯ ಪ್ರಮಾಣ ಪತ್ರದ ಜಿರಾಕ್ಸ್ ಪ್ರತಿಯನ್ನು ಶಾಲೆಗೆ ಪ್ರವೇಶ ಹೊಂದುವ ವೇಳೆ ಮುಖ್ಯ ಶಿಕ್ಷಕರಿಗೆ ಸಲ್ಲಿಸಬೇಕು. ಶಾಲೆಯ ಮುಖ್ಯ ಶಿಕ್ಷಕರು ಇಲಾಖೆಗೆ ನೀಡುವ ನಮೂನೆಯಲ್ಲಿ ವಿವರ ಭರ್ತಿ ಮಾಡಿ, ವಿದ್ಯಾರ್ಥಿಗಳಿಂದ ಪಡೆದ ದಾಖಲಾತಿಗಳೊಂದಿಗೆ ಜೂನ್ 30 ರೊಳಗಾಗಿ ತಾಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಕಚೇರಿ, ಕಂಟೋನ್‌ಮೆಂಟ್, ಬಳ್ಳಾರಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ. ಸಂ.08392-244492 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಸಿ ಟ್ಯಾಕ್ಸಿಯೋಜನೆಯ ಪಟ್ಟಿಬಿಡುಗಡೆ

**ಬಳ್ಳಾರಿ**

ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯಿಂದ 2016-17ನೇ ಸಾಲಿನ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ/ಪ. ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ನಿರುದ್ಯೋಗಿ ಫಲಾನುಭವಿಗಳಿಗೆ 2 ಲಕ್ಷ ಸಾಲ ಸೌಲಭ್ಯ ನೀಡಿ, ಪ್ರವಾಸಿ ಟ್ಯಾಕ್ಸಿ ಒದಗಿಸಲು ಫಲಾನುಭವಿಗಳ ಅರ್ಹ/ಅನರ್ಹ ಪಟ್ಟಿಯನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ. ಅರ್ಹ/ಅನರ್ಹ ಪಟ್ಟಿಯನ್ನು ಹೊಸಪೇಟೆಯ ಪ್ರವಾಸೋದ್ಯಮ ಇಲಾಖೆಯ ಕಚೇರಿಯಲ್ಲಿ ಲಗತ್ತಿಸಿದೆ. ಅಭ್ಯರ್ಥಿಗಳು ಯಾವುದೇ ಆಕ್ಷೇಪಣೆ/ದೂರುಗಳು ಇದ್ದಲ್ಲಿ ಜುಲೈ 03 ರೊಳಗಾಗಿ ಪ್ರವಾಸೋದ್ಯಮ ಇಲಾಖೆ, ಉಪನಿರ್ದೇಶಕರ ಕಚೇರಿ, ಹೊಸಪೇಟೆ ಕಚೇರಿಗೆ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಂಜಾನ್ ಹಬ್ಬದ ಪ್ರಯುಕ್ತ ಶಾಂತಿಸಭೆ



**ಸಿರಿಗೇರಿ**

ಇಲ್ಲಿನ ಸಿರಿಗೇರಿಯ ಮಾದರಿ ಪೋಲಿಸ್‌ಠಾಣೆಯಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಶಾಂತಿಸಭೆ ನಡೆಸಲಾಯಿತು ಈ ವೇಳೆ ಶಾಂತಿಸಭೆ ಕುರಿತು ಮಾತನಾಡಿದ ಸಿ.ಪಿ.ಐ.ಗೋಳಸಂಗಿ ಮಾತನಾಡಿ 26ರಂದು ನಡೆಯುವ ರಂಜಾನ್ ಹಬ್ಬವನ್ನು ಎಲ್ಲ ಮುಸ್ಲಿಂ ಬಂದವರು ಶಾಂತಿ ಮತ್ತು ಸೌಹಾರ್ದತೆಯಿಂದ ಯಾವುದೆ ಗಾಲಟೆ ಸಂಬವಿಸಿದಂತೆ ಹಬ್ಬವನ್ನು ಆಚಾರಣೆಮಾಡಬೇಕು ಎನದಾರು ಸಮಸ್ಯೆ ಬಂದಲ್ಲಿ ಹಬ್ಬದ ಮುನ್ನವೆ ನಮಗೆ ತಿಳಿಸ ಬೇಕು. ಎಂದರು ಈ ಸಂದರ್ಭದಲ್ಲಿ ಸಿ.ಪಿ.ಐ.ಗೋಳಸಂಗಿ ಪಿ.ಎಸ್.ಐ.ಮಂಗುನಾಯ್ಕ, ಎ.ಎಸ್.ಐ.ಜೀವರತ್ನಂ, ರಾಮಂಚಂದ್ರಪ್ಪ ಹಾಗೂ ಊರಿನ ಮುಖಂಡರಾದ ಅಹಮ್ಮದ್ ಸಾಬ್, ಆಡಿವೇಯ್ಯ ಸ್ವಾಮಿ, ಮುರ್ಷಿದ್ ಅಹಮ್ಮದ್, ಗೋಡೆ ಸಂಪತ್ ಕುಮಾರ್, ಬಿಚ್ಚುಗತ್ತಿ ಮಲ್ಲಯ್ಯ, ಕೊಳ್ಳಿ ಪಾವಡಿನಾಯ್ಕ ,ರಾರಾವಿ ವೆಂಕಟೇಶ್ , ಮತ್ತು ನೂರರು ಜನ ಹಾಗೂ ಠಾಣ ಸಿಬ್ಬಂದಿ ಶಾಂತಿಸಭೆಯಲ್ಲಿ ಪಾಲ್ಗೋಂಡಿದ್ದರು

# ಆರ್‌ಟಿಇ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಕ್ಕೆ ಒತ್ತಾಯ



**ಹಗರಿಬೊಮ್ಮನಹಳ್ಳಿ**

ಆರ್‌ಟಿಇ ಕಾಯ್ದೆಯ ಅಡಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆಗಳಲ್ಲಿ ಉಚಿತವಾಗಿ ಪಠ್ಯಪುಸ್ತಕಗಳನ್ನು ನೀಡದೆ, ಹಣ ಪಡೆದು ವಿತರಿಸುತಿದ್ದಾರೆ. ಇದರಿಂದ ಆರ್‌ಟಿಇನಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದ ಫಲಾನುಭವಿ ಪಾಲಕರು ಬಿಇಒಗೆ ಮನವಿ ಸಲ್ಲಿಸುವ ಮೂಲಕ ಉಚಿತ ಪಠ್ಯಪುಸ್ತಕಗಳನ್ನು ಇತರಿಸುವಂತೆ ಗುರುವಾರ ಮನವಿಸಲ್ಲಿಸಿದರು.

ಪಟ್ಟಣದ ಶಿಕ್ಷಣ ಇಲಾಖೆಯ ಬಳಿ ಸೇರಿದ ಆರ್‌ಟಿಇ ಫಲಾನುಭವಿ ಪಾಲಕರು, ಬಿಇಒ ಪಾರಿಬಸವರಾಜ್ ರವರಿಗೆ ಮನವಿ ಸಲ್ಲಿಸುವ ಮೂಲಕ, ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯಿಂದ ಹೊರಡಿಸಿರುವ ಸೂತ್ತೋಲೆಯ ಪ್ರಕಾರ, 2017-18ನೇ ಸಾಲಿನಲ್ಲಿ ಆಯ್ಕೆಯಾದ ಆರ್‌ಟಿಇ ವಿದ್ಯಾರ್ಥಿಗಳಿಗೆ ಇಲಾಖೆಯಿಂದಲೇ ಉಚಿತ ಪಠ್ಯಪುಸ್ತಕಗಳನ್ನು ಪೂರೈಕೆಮಾಡಲಾಗುತ್ತದೆ ಎನ್ನುವ ಆದೇಶದ ಹಿನ್ನೆಲೆ ಇದ್ದರೂ. ಪಟ್ಟಣದಲ್ಲಿರುವ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಉಚಿತ ಪಠ್ಯಪುಸ್ತಕಗಳನ್ನು ನೀಡದೆ, ಪಾಲಕರಿಂದ ಹಣ ಪಡೆದು ಪುಸ್ತಕಗಳನ್ನು ನೀಡುತಿದ್ದಾರೆ ಎಂದು ಆರೋಪಿಸಿದರು. ಅಲ್ಲದೆ, ಸಂಸ್ಥೆಗಳ ಮೇಲೆ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ನಂತರ ಬಿಇಒ ಪಾರಿಬಸವರಾಜ್ ಮಾತನಾಡಿ, ಶಿಕ್ಷಣ ಇಲಾಖೆ ಈ ವರ್ಷ ತೆಗೆದುಕೊಂಡಿರುವ ತೀರ್ಮಾನದಂತೆ, ಆರ್ ಟಿಇ ಅಡಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸರ್ಕಾರವೇ ಇಲಾಖೆಯ ಮೂಲಕ ಪುಸ್ತಕಗಳನ್ನು ಪೂರೈಕೆಮಾಡಲಾಗುತ್ತೆ, ಅಲ್ಲದೆ ತಾಲೂಕಿನ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ಆದೇಶವನ್ನು ಕಚೇರಿಯಿಂದ ಕಳಿಸಿಕೊಡಲಾಗಿದೆ ಎಂದು ಸ್ಪಷ್ಟಪಡಿಸಿದರು. ಶೀಘ್ರದಲ್ಲೆ ಇಲಾಖೆಯಿಂದ ಪುಸ್ತಗಳನ್ನು ಪೂರೈಕೆಮಾಡಲಾಗುತ್ತದೆ ಎಂದರು.

ಕಾಂಗ್ರೆಸ್ ಮುಖಂಡ ಅಲಬೂರು ಕೆ.ಮಂಜುನಾಥ, ಕೆ.ಎಂ.ವೀರಭದ್ರಯ್ಯ, ಕೆ.ಎಂ.ಉದಯಕುಮಾರ್, ಟಿ.ರಾಘವೇಂದ್ರ, ಕೆ.ದೊಡ್ಡಬಸಪ್ಪ, ಕೆ.ಕರೀಂಸಾಬ್, ವಕೀಲರಾದ ವಾಸಂತಿ, ಕೆ.ಗೇನಪ್ಪ, ಬಿ.ಶಿವಕುಮಾರ್, ಕೆ.ಆನಂದ, ಕೆ.ಧರ್ಮಪ್ಪ, ಪಿ.ಹನುಮಂತ, ಕೆ.ಮಂಜುನಾಥ, ಎಂ.ಎಸ್.ಸುಭಾನ್, ಎಚ್.ದೇವರಾಜ್, ನಾಗರಾಜ್, ಕೆ.ಮಹಮದ್ ಹಂಜ ಇದ್ದರು.

# ಜೆಡಿಎಸ್ ಪಕ್ಷವನ್ನು ಬಲಪಡಿಸಿ



**ಹೊಸಪೇಟೆ**

ಮುಂಬರುವ ದಿನಗಳಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಕಾರ್ಯಕರ್ತರು ಸಂಘಟಿತರಾಗಿ ಶ್ರಮಿಸಬೇಕು ಎಂದು ಜೆಡಿಎಸ್ ತಾಲೂಕಾಧ್ಯಕ್ಷ ಶಫಿ ಬರಕಾತಿ ಹೇಳಿದರು.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಸಂಜೆ ನಡೆದ ವಿಜಯನಗರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಜೆಡಿಎಸ್ ಪಕ್ಷವು ರೈತರ ಪಕ್ಷವಾಗಿದ್ದು, ಕಾಂಗ್ರೆಸ್ -ಬಿಜೆಪಿ ಪಕ್ಷಗಳು ಇಂದು ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡು ಪಕ್ಷಗಳಿಂದ ರೈತರು ಏನು ನಿರೀಕ್ಷೆ ಮಾಡುವಂತಿಲ್ಲ, ರೈತಪರ ಹೋರಾಡುವ ಪಕ್ಷವಿದ್ದರೆ ಅದು ಜೆಡಿಎಸ್ ಮಾತ್ರ. ಅದಕ್ಕಾಗಿ ಕಾರ್ಯಕರ್ತರು ಈಗಿನಿಂದಲೇ ಪಕ್ಷವನ್ನು ಸಂಘಟಿಸುವತ್ತ ಗಮನ ಹರಿಸಬೇಕು ಎಂದರು.

ಈಗಾಗಲೇ ಕ್ಷೇತ್ರದಾದ್ಯಂತ ಹಳ್ಳಿ ಹಳ್ಳಿಗೆ ಹೋಗಿ ಕಾರ್ಯಕರ್ತರನ್ನು ಭೇಟಿ ಮಾಡಿ, ಪಕ್ಷ ಸಂಘಟನೆಯಲ್ಲಿ ತೊಡಗುವಂತೆ ಮನವಿ ಮಾಡಿಕೊಳ್ಳಲಾಗುತ್ತಿದೆ. ಮಂದಿನ ದಿನಗಳಲ್ಲಿ ಇಡೀ ಕ್ಷೇತ್ರದಾದ್ಯಂತ ಸಂಚರಿಸಿ ದೊಡ್ಡಮಟ್ಟದ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಸಭೆಯಲ್ಲಿ ಮುಖಂಡರಾದ ಕೆ.ಕೊಟ್ರೇಶ್, ಕೆ.ಕೃಷ್ಣ ದೊಡ್ಡರಾಮಣ್ಣ, ಸೋಮಶೇಖರ್ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

18-06-2017.indd 5 6/18/2017 11:51:21 PM